ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೯ Volume 149	ಬೆಂಗಳೂರು, ಗುರುವಾರ, ಜುಲೈ ೩೧, ೨೦೧೪ (ಶ್ರಾವಣ ೯, ಶಕ ವರ್ಷ ೧೯೩೬) Bangalore, Thursday, July 31, 2014 (Shravana 9, Shaka Varsha 1936)	ಸಂಚಿಕೆ ೩೧ Issue 31

ಭಾಗ ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ಆಯುಷ್ ಇಲಾಖೆ

ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು-560 009

ಅಧಿಸೂಚನೆ

ಸಂ:ಆಯುಷ್/170/ಸಿಬ್ಬಂದಿ(2)/2013-14. ದಿನಾಂಕ :16-06-2014

ವಿಷಯ:- ಆಯುಷ್ ಇಲಾಖೆಯಡಿ ಖಾಲಿ ಇರುವ ಬ್ಯಾಕ್‌ಲಾಗ್ ಶುಶ್ರೂಷಕಿ ಮತ್ತು ಔಷಧ ವಿತರಕರು ಹುದ್ದೆಗಳಿಗೆ ನೇರ ನೇಮಕಾತಿಯಿಂದ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ: 21-11-2001.

2. ನಿರ್ದೇಶನಾಲಯದ ಅಧಿಸೂಚನೆ ಸಂಖ್ಯೆ: ಆಯುಷ್ 170 ಸಿಬ್ಬಂದಿ(2) 2012-13, ದಿನಾಂಕ: 31-08-2013.
(ದಿನಾಂಕ: 05-09-2013 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡಿದೆ.)

3. ನಿರ್ದೇಶನಾಲಯದ ನೇಮಕಾತಿ ಸಮಿತಿಯ ನಡವಳಿಗಳು ದಿನಾಂಕ: 12-12-2013 ಮತ್ತು 28-01-2014.

ಆಯುಷ್ ಇಲಾಖೆಯಲ್ಲಿ ಕ್ರಮವಾಗಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿಕಲಚೇತನ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಗ್ರೂಪ್ - ಸಿ ವೃಂದದ ಕ್ರಮವಾಗಿ ಔಷಧ ವಿತರಕರು - 1 / ಶುಶ್ರೂಷಕಿ - 1 ಬ್ಯಾಕ್ ಲಾಗ್ ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಶುಶ್ರೂಷಕರು - 01 ಹುದ್ದೆ

ಕ್ರ ಸಂ.	ಹುದ್ದೆ ಮತ್ತು ವೇತನ ಶ್ರೇಣಿ	ಮೀಸಲಾತಿ	ಸಮತಳ ಮೀಸಲಾತಿ	ವಯೋಮಿತಿ	ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ	ವಯೋಮಿತಿ ಮತ್ತು ಆಯ್ಕೆ ವಿಧಾನ
1	ಶುಶ್ರೂಷಕರು - 1 ಹುದ್ದೆ ರೂ. 17650-32000	ಪರಿಶಿಷ್ಟ ಪಂಗಡ	ವಿಕಲಚೇತನ	ಕನಿಷ್ಠ - 18 ವರ್ಷ ಗರಿಷ್ಠ - 40 ವರ್ಷ	Must have passed in SSLC or equivalent Qualification with Diploma in Nursing 3½ years course of an institution recognized by the Govt. of Karnataka.	ಎಸ್.ಎಸ್.ಎಲ್.ಸಿ. ಯಲ್ಲಿ ಒಟ್ಟು ಶೇಕಡವಾರು + ನರ್ಸಿಂಗ್ ಡಿಪ್ಲೊಮದಲ್ಲಿ ಪಡೆದ ಒಟ್ಟು ಶೇಕಡವಾರು ಅಂಕಗಳನ್ನು 2 ರಿಂದ ಭಾಗಿಸಿ = %

ಔಷಧ ವಿತರಕರು - 01 ಹುದ್ದೆ

ಕ್ರ ಸಂ.	ಹುದ್ದೆ ಮತ್ತು ವೇತನ ಶ್ರೇಣಿ	ಮೀಸಲಾತಿ	ಸಮತಳ ಮೀಸಲಾತಿ	ವಯೋಮಿತಿ	ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ	ವಯೋಮಿತಿ ಮತ್ತು ಆಯ್ಕೆ ವಿಧಾನ
1	ಔಷಧ ವಿತರಕರು - 1 ಹುದ್ದೆ ರೂ. 14550-26700	ಪರಿಶಿಷ್ಟ ಜಾತಿ	ವಿಕಲಚೇತನ	ಕನಿಷ್ಠ - 18 ವರ್ಷ ಗರಿಷ್ಠ - 40 ವರ್ಷ	Must be holder of Diploma in Pharmacy (AYUSH) from a recognized institution. Provided that if no candidates is available	ಎಸ್.ಎಸ್.ಎಲ್.ಸಿ. ಯಲ್ಲಿ ಒಟ್ಟು ಶೇಕಡವಾರು + ನರ್ಸಿಂಗ್ ಡಿಪ್ಲೊಮದಲ್ಲಿ ಪಡೆದ ಶೇಕಡವಾರು ಒಟ್ಟು

					then a candidate who passed PUC with Science subject or equivalent qualification and Diploma in Pharmacy from institution recognized by Government of Karnataka.	ಅಂಕಗಳನ್ನು 2 ರಿಂದ ಭಾಗಿಸಿ = %

ಸೂಚನೆ:

1. ಅರ್ಜಿಯನ್ನು ಆಯುಷ್ ಇಲಾಖೆಯ ವೆಬ್ ಸೈಟ್ - www.karunadu/ayush.gov.in_ ನಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಅಭ್ಯರ್ಥಿಯ ಫೋಟೋ ಮತ್ತು ಸಹಿಯೊಂದಿಗೆ, ರೂ. 25/– ಗಳ ಡಿ.ಡಿ.ಯನ್ನು ಆಡಳಿತಾಧಿಕಾರಿಗಳು, ಆಯುಷ್ ನಿರ್ದೇಶನಾಲಯ, ಬೆಂಗಳೂರು, ರವರ ಹೆಸರಿನಲ್ಲಿ ಪಡೆದು, ಮೂಲ ಡಿ.ಡಿ.ಯನ್ನು ಅರ್ಜಿಯೊಂದಿಗೆ ಇತರೆ ದಾಖಲಾತಿಗಳನ್ನು ಲಗತ್ತಿಸಿ ನೇರವಾಗಿ ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು – 560009 ರವರಿಗೆ ನೊಂದಾಯಿತ ಅಂಚೆಯ ಮೂಲಕ ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **25–06–2014.**

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **31–07–2014.**

ಅರ್ಹತಾ ಷರತ್ತುಗಳು:

1. ಭಾರತೀಯ ನಾಗರೀಕನಾಗಿರಬೇಕು.
2. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಪತ್ನಿಯನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೆ ನೇಮಕಾತಿ ಅರ್ಹರಾಗಿರುವುದಿಲ್ಲ.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಗಳಿಂದ ಮುಕ್ತರಾಗಿರಬೇಕು.
4. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.
5. ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

II. ವಯೋಮಿತಿ

ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳು ಗರಿಷ್ಠ – 40 ವರ್ಷಗಳನ್ನು ಮೀರಿರಬಾರದು. ವಿಶೇಷ ನೇಮಕಾತಿ ನಿಯಮಗಳನ್ವಯ 29 ವರ್ಷ ಪೂರ್ಣಗೊಳಿಸಿರುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು, 29 ರಿಂದ 40 ವರ್ಷಗಳ ವಯಸ್ಸಿನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಾಗ ಮಾತ್ರ 18 ರಿಂದ 28 ವಯಸ್ಸಿನ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು,

III. ಶೈಕ್ಷಣಿಕ ವಿದ್ಯಾರ್ಹತೆ

ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕಕ್ಕೆ ಅನುಸೂಚಿಯಲ್ಲಿ ಅಧಿಸೂಚಿಸಿದ ಹುದ್ದೆಯ ಮುಂದೆ ಸೂಚಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಬೇಕು. ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

IV. ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು:

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು:

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆ ದಿನಾಂಕದೊಳಗೆ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿ ಪರಿಶೀಲನಾ ಸಮಯದಲ್ಲಿ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಈ ಸೂಚನೆಗಳಲ್ಲಿ ತೋರಿಸಲಾಗಿದೆ. ಈ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು, ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದು ಹಾಗೂ ಅದೇ ಪ್ರಮಾಣ ಪತ್ರವನ್ನು ಮೂಲ ದಾಖಲಾತಿ ಪರಿಶೀಲನಾ ಸಮಯದಲ್ಲಿ ಹಾಜರುಪಡಿಸತಕ್ಕದ್ದು (ಅನುಬಂಧ–1)

V. ಅಂಗವಿಕಲ ಅಭ್ಯರ್ಥಿ:

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿ: 03–09–2005 ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಸಮೂಹ–'ಎ' ಮತ್ತು 'ಬಿ' ಗುಂಪಿನ ಹುದ್ದೆಗಳಿಗೆ ಶೇಡಕ 3 ರಷ್ಟು (ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 21 ಎಸ್‌ಆರ್‌ಆರ್ 2008 ದಿನಾಂಕ: 03–08–2009 ರ ಅನುಸೂಚಿಯಡಿ ಸೇರ್ಪಡೆ ಮಾಡಲಾಗಿರುವ ಇಲಾಖೆಗಳು) ಮತ್ತು ಸಮೂಹ 'ಸಿ' ಗುಂಪಿನ ಹುದ್ದೆಗಳಿಗೆ ಶೇಕಡ 5 ರಷ್ಟು (ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 52 ಎಸ್‌ಆರ್‌ಆರ್ 99 ದಿ: 29–11–2002ರ ಅನುಸೂಚಿಯಡಿ ಸೇರ್ಪಡಿಸಲಾಗಿರುವ ಇಲಾಖೆಗಳು) ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40 ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೆನೆನಿ 2005 ದಿನಾಂಕ: 19–11–2005 ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು/ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. ಈ ಪ್ರಮಾಣ ಪತ್ರದ ನಮೂನೆಯನ್ನು ಈ ಸೂಚನೆಗಳಿಗೆ ಅನುಬಂಧಿಸಲಾಗಿದೆ (ಅನುಬಂಧ–2).

VI. ವ್ಯಾಸಂಗ ಪ್ರಮಾಣ ಪತ್ರದ ಬಗ್ಗೆ:

ಕರ್ನಾಟಕ ರಾಜ್ಯದಲ್ಲಿ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ಅಂದರೆ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡದಿರುವ ಯಾವುದೇ ಅಭ್ಯರ್ಥಿಯು ಈ ನಿಯಮಗಳ ಅಡಿಯಲ್ಲಿ ಆಯ್ಕೆಗೆ ಅರ್ಹರಾಗುವುದಿಲ್ಲ. ಅಭ್ಯರ್ಥಿಗಳು 10 ವರ್ಷ ಕರ್ನಾಟಕ ರಾಜ್ಯದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಗಳ ಮುಖ್ಯೋಪಾಧ್ಯಾಯರಿಂದ ಪ್ರಮಾಣ ಪತ್ರಗಳನ್ನು ಪಡೆದು ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

VII. ಸರ್ಕಾರಿ ಸೇವೆಯಲ್ಲಿರುವ ನೌಕರರಿಗೆ

ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ನೌಕರರು(ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದಿಟ್ಟುಕೊಂಡಿರತಕ್ಕದ್ದು) ಅನುಬಂದ–3.

ವಿಶೇಷ ಸೂಚನೆಗಳು:

1) ಹುದ್ದೆಗೆ ನಿಗದಿಪಡಿಸಿದ ಶುಲ್ಕ (ಅರ್ಜಿಯನ್ನು ಭರ್ತಿ ಮಾಡಿದ ನಂತರ ಪಾವತಿಸತಕ್ಕದ್ದು) ಪಾವತಿ ರಸೀತಿ.
2) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ ಅಂಕಪಟ್ಟಿಗಳು
3) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ
4) ನಿರಾಪೇಕ್ಷಣಾ ಪತ್ರ (No Objection Certificate) (ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ)
5) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ,
6) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2 ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
7) ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ವಯೋಮಿತಿ ಸಡಿಲಿಕೆಗಾಗಿ ಮೀಸಲಾತಿ ಕೋರಿದ್ದಲ್ಲಿ)

VIII ದುರ್ನಡತೆ:

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗುರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ಮೂಲ ದಾಖಲಾತಿ ಪರಿಶೀಲನಾ ಸಮಯದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗ ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು / ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಮೂಲ ದಾಖಲಾತಿ ಪರೀಶೀಲನಾ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

(ಎ) ಅರ್ಹ ಅಭ್ಯರ್ಥಿಗಳಿಗೆ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗುವ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗುವುದು.ಸದರಿ ಪತ್ರವು ಸ್ವೀಕರಿಸದೆ ಇದ್ದಲ್ಲಿ ಅಂತರ್ಜಾಲದಲ್ಲಿ ಬಿತ್ತರಿಸಲಾಗುವ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿತ ದಿನಾಂಕದಂದು ಹಾಜರಾಗತಕ್ಕದ್ದು.

ಸದಸ್ಯ ಕಾರ್ಯದರ್ಶಿಗಳು
ನೇಮಕಾತಿ ಸಮಿತಿ ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ,
ಬೆಂಗಳೂರು – 560 009.

ಅನುಬಂಧ–1

(ಪ.ಜಾ/ಪ.ಪಂ.ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ–ಡಿ

(ನಿಯಮ 3ಎ (2) (3) ನ್ನು ನೋಡಿ)

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ. ಪ್ರಮಾಣ ಪತ್ರ ___________ ರಾಜ್ಯದ / ಕೇಂದ್ರಡಳಿತ ಪ್ರದೇಶದ _____________ ಜಿಲ್ಲೆಯ / ವಿಭಾಗದ _____________ ಗ್ರಾಮ / ಪಟ್ಟಣ *ನಿವಾಸಿಯಾದ ಶ್ರೀ/ಶ್ರೀಮತಿ ___________ ಎಂಬುವವರ ಮಗ / ಮಗಳಾದ ಶ್ರೀ/ಶ್ರೀಮತಿ ______ ಇವರು ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ / ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ. 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

  ((ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಾಯಿ ರಾಜ್ಯ, ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971 ರ ಮೂಲಕ ತಿದ್ದುಪಡಿಯಾದಂತೆ).

- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ 1956
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ. 1976 ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟು ಆದೇಶ 1959,
- ಸಂವಿಧಾನ (ದಾದರ್ ಮತ್ತು ನಗರ ಹವೇಲಿ) ಅನುಸೂಚಿತ ಜಾತಿಗಳ ಆದೇಶ, 1962,
- ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964,
- ಸಂವಿಧಾನ ಅನುಸೂಚಿತ ಬುಡಕಟ್ಟುಗಳ (ಉತ್ತರ ಪ್ರದೇಶ) ಆದೇಶ, 1967,
- ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ಬುಡಕಟ್ಟುಗಳ ಆದೇಶ, 1988,
- ಸಂವಿಧಾನ (ನಾಗಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ,

1. ಶ್ರೀ/ಶ್ರೀಮತಿ ಕುಮಾರಿ* _______________ ಮತ್ತು / ಅಥವಾ ಅವನ*/ಅವಳ* ಕುಟುಂಬವು _________________ ರಾಜ್ಯ / ಕೇಂದ್ರಾಡಳಿತ ಪ್ರದೇಶದ ___________ ಜಿಲ್ಲಾ /ವಿಭಾಗದ * _____________ ಗ್ರಾಮ / ___________ ಪಟ್ಟಣದ ಸಾಮಾನ್ಯ ನಿವಾಸಿ(ಗಳು).

ಸಹಿ

ತಹಶೀಲ್ದಾರ್

ಪದನಾಮ

ಸ್ಥಳ: ಕಛೇರಿಯ ಮೊಹರಿನೊಂದಿಗೆ

ದಿನಾಂಕ: ರಾಜ್ಯ/ಕೇಂದ್ರಾಡಳಿತ ಪ್ರದೇಶ*

ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟುಬಿಡಿ / ಹೊಡೆದು ಹಾಕಿ

ಸೂಚನೆ: ಇಲ್ಲಿ ಉಪಯೋಗಿಸಿದ "ಸಾಮಾನ್ಯ ನಿವಾಸಿಗಳು" ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ 1950 ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತವೆ.

ಅನುಬಂಧ–2

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೇನೆನಿ 2005, ದಿ: 19–11–2005

CERTIFICATE FOR THE PERSONS WITH DISABILITIES

This is to certify that Sri/Smt/Ku. ___________________ Son/Wife/Daughter of Shri ___________ Age _____ old, male/female, Registration NO._______ is a case of __________ He/She is physically disabled /visual disabled/speech & hearing disabled and has __ % ___ percent) permanent (Physical impairment/visual impairment speech & hearing impairment) in relation to his/her _____________

Note:

1.This condition is progressive/non progressive likely to improve/ not likely to improve.

2. Re-assessment is not recommended /is recommended after a period of ______ months/years.

*Strike out which is not applicable

Recent attested

Photograph showing

the disability

affixed here

sd/	sd/	sd/
DOCTOR	DOCTOR	DOCTOR
(seal)	(seal)	(seal)

Countersigned by the
Medical Superintendent CMO
Head of Hospital (with seal)

Signature/Thumb impression
Of the disabled person.

Explanation: As per Notification No.DPAR 50 SRR 2000 dated 03-09-2005 "Physically handicapped candidates" or " person with disability " means a person suffering from not less than forty percent of the following disabilities: 1. Blindness 2. Low vision 3. Hearing impairment 4. Locomotor disability 5. Leprosy cured 6. Mental retardation 7. Mental illness .

(1) Blindness refers to a condition where a person suffers from any of the following conditions, namely a.total absence of sight, or b. visual acuity not exceeding 6/60 or 20/200 (snellen) in the better eye with correcting lenses; or © limitation of the field of vision subtending of angle of 20 degree or worse.

(2) Persons with low vision means a person with impairment of visual functioning ever after treatment or standard refractive correction, but who uses or is potentially capable of using vision for the planning or execution of a task with appropriate assistive device.

(3) "Hearing impairment" means loss of 60 decibels in the better ear in the conversational range of frequencies.

(4) "Locomotors disability" means disability of the bones, joints or muscles leading to substantial restriction of the movement of the limbs or any form of cerebral palsy.

(5) Leprosy cured: means any person who has been cured of Leprosy, but is suffering from ,

(i) Loss of sensation in hands or feet as well as loss of sensation and paresis in the eye and eyelid, but with no manifest deformity;

(ii) Manifest deformity and paresis but having sufficient mobility in their hands & feet to enable them to engage in normal economic activity;

(iii) Extreme physical deformity as well as advanced age which prevents him from undertaking any gainful occupation; and the expression "Leprosy cured" be construed accordingly;

(6) Mental Retardation : means a condition of arrested or incomplete development of mind of a person who is ___ characterized by sub normally of intelligence.

(7) Mental illness: means any mental disorder other than mental retardation.

ಅನುಬಂಧ –4

ರಾಜ್ಯ ಸರ್ಕಾರಿ/ಕೇಂದ್ರ ಸರ್ಕಾರಿ ನೌಕರರು ಒದಗಿಸಬೇಕಾದ ಪ್ರಮಾಣ ಪತ್ರ

ಶ್ರೀ/ಶ್ರೀಮತಿ______________________ರವರು ರಾಜ್ಯ / ಕೇಂದ್ರ ಸರ್ಕಾರದಲ್ಲಿ ______________________ ಇಲಾಖೆಯಲ್ಲಿ ಖಾಯಂ/ತಾತ್ಕಾಲಿಕ ಹುದ್ದೆಯನ್ನು ದಿನಾಂಕ: ________ರಿಂದ ______________ ರವರೆಗೆ ಹೊಂದಿರುವರು. ಈ ಹುದ್ದೆಗೆ ಇವರು ನೇಮಕಾತಿ ನಿಯಮಗಳಡಿ ಆಯ್ಕೆಯಾಗಿದ್ದು, ಸದರಿ ಅರ್ಜಿ ಸಲ್ಲಿಸಲು ಅವರಿಗೆ ಅನುಮತಿ ನೀಡಲಾಗಿದೆ.

ಸ್ಥಳ :
ದಿನಾಂಕ:

ನೇಮಕಾತಿ ಪ್ರಾಧಿಕಾರದ ಸಹಿ/
ಇಲಾಖೆಯ ಹೆಸರು ಮತ್ತು ಮೊಹರಿನೊಂದಿಗೆ.

ಆಯುಷ್ ಇಲಾಖೆ

ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು–560 009

ಇ–ಮೇಲ್:directorayush@gmail.com

ಅಧಿಸೂಚನೆ ಸಂ:ಆಯುಷ್/170/ಸಿಬ್ಬಂದಿ(2)/2013–14. ದಿನಾಂಕ : 18–02–2014

ಪರಿಶಿಷ್ಠ ಜಾತಿಯ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು

ಆಯುಷ್ ಇಲಾಖೆಯಲ್ಲಿ ಔಷಧ ವಿತರಕರು – 01 ಹುದ್ದೆಗೆ ಅರ್ಜಿ

1	ಅಭ್ಯರ್ಥಿಯ ಪೂರ್ಣ ಹೆಸರು (ಎಸ್.ಎಸ್.ಎಲ್.ಸಿ.ಅಥವಾ 10ನೇ ತರಗತಿ ಅಂಕಪಟ್ಟಿಯಲ್ಲಿರುವಂತೆ)	
2	ತಂದೆಯ ಹೆಸರು:	
3	ತಾಯಿಯ ಹೆಸರು:	
4	ಗಂಡ/ಹೆಂಡತಿಯ ಹೆಸರು (ವಿವಾಹವಾಗಿದ್ದರೆ)	
5	ಹುಟ್ಟಿದ ದಿನಾಂಕ:	
6	ಲಿಂಗ:	
7	ಅಂಚೆ ವಿಳಾಸ ಪಿನ್‌ಕೋಡ್ ಸಹಿತ	
8	**ವಿದ್ಯಾರ್ಹತೆ ವಿವರಗಳು:** (i) ಅಭ್ಯರ್ಥಿಯು ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಮತ್ತು (ii) ಕರ್ನಾಟಕ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಯಿಂದ ಎರಡು ವರ್ಷಗಳ (2 ವರ್ಷಗಳ) ಫಾರ್ಮಸಿಯಲ್ಲಿ ಉತ್ತೀರ್ಣರಾಗಿರಬೇಕು. **ಭಾವಚಿತ್ರ ಮತ್ತು ಸಹಿ**	(iii) ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು (table A below) (**iv**).ಎರಡು ವರ್ಷಗಳ ಫಾರ್ಮಸಿಯಲ್ಲಿ ಪಡೆದಿರುವ ಅಂಕಗಳು (table B below)
9	ಫಾರ್ಮಸಿ ಕೌನ್ಸಿಲ್‌ನಲ್ಲಿ ನೊಂದಾಯಿಸಿದ ದಿನಾಂಕ	
10	ಮೀಸಲಾತಿ ಕೋರಿರುವುದು.	
11	ರಾಷ್ಟ್ರೀಕೃತ ಬ್ಯಾಂಕಿನಲ್ಲಿ ರೂ.25/– ಗಳ ಡಿಡಿಯ ವಿವರ	ಬ್ಯಾಂಕಿನ ಹೆಸರು ಡಿಡಿ ಸಂಖ್ಯೆ: ದಿನಾಂಕ:
12	ಒಟ್ಟು ಲಗತ್ತುಗಳು	

ಗರಿಷ್ಠ ಅಂಕಗಳು	**ಪಡೆದಿರುವ ಅಂಕಗಳು**	**ಶೇಕಡ**

	ಗರಿಷ್ಠ ಅಂಕಗಳು	**ಪಡೆದಿರುವ ಅಂಕಗಳು**
ಮೊದಲನೇ ಫಾರ್ಮಸಿ		
ಎರಡನೇ ಫಾರ್ಮಸಿ		
ಒಟ್ಟು 2 ವರ್ಷಗಳ ಫಾರ್ಮಸಿಯಲ್ಲಿ ಪಡೆದ ಅಂಕಗಳು		
ಶೇಕಡ		

ಘೋಷಣೆ

ಈ ಕೆಳ ಸಹಿ ಮಾಡಿರುವ ಅರ್ಜಿದಾರನಾದ ನಾನು ಘೋಷಿಸುವುದೇನೆಂದರೆ, ಈ ಅರ್ಜಿಯಲ್ಲಿ ತಿಳಿಸಿರುವ ಎಲ್ಲಾ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ನಂಬಿಕೆಯಂತೆ ಸತ್ಯವಾಗಿರುತ್ತವೆ ಮತ್ತು ಪೂರ್ಣವಾಗಿರುತ್ತವೆ. ಈ ನೇಮಕಾತಿಗೆ ಸಂಬಂಧಪಟ್ಟಂತೆ ನಾನು ನಿಯಮಗಳನ್ನು ಅರಿತಿದ್ದೇನೆ ಮತ್ತು ನಾನು ತಿಳಿಸಿರುವ ಯಾವುದೇ ಮಾಹಿತಿಯು ಅಸತ್ಯದಿಂದ ಕೊಡಿದ್ದಲ್ಲಿ ನನ್ನ ಆಯ್ಕೆಗೆ ಮುಂಚಿತವಾಗಿ ಅಥವಾ ಆಯ್ಕೆ ನಂತರ ನನ್ನ ಅರ್ಜಿಯನ್ನು ತಿರಸ್ಕರಿಸಬಹುದು. ಅಲ್ಲದೆ ಕಾಲಕಾಲಕ್ಕೆ ತಿದ್ದುಪಡಿಗಳೊಂದಂತೆ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 20

ರಂತೆ ನನ್ನ ಮೇಲೆ ಕ್ರಮ ಜರುಗಿಸಬಹುದು. ನಾನು ಈ ಹುದ್ದೆಗೆ ನಿಗಧಿಪಡಿಸಿರುವ ಎಲ್ಲಾ ಅರ್ಹತಾ ಷರತ್ತುಗಳಾದ ವಿದ್ಯಾರ್ಹತೆ, ವಯಸ್ಸು, ಮೀಸಲಾತಿಗಳಿಗೆ ಅರ್ಹನಾಗಿರುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ.

ಈ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳ ಪ್ರತಿಗಳು

1) ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ,

2) ಪಿ.ಯು.ಸಿ. ಅಂಕಪಟ್ಟಿ

2) ಡಿಪ್ಲೊಮ ಇನ್ ಫಾರ್ಮಸಿಯಲ್ಲಿ ತೇರ್ಗಡೆಯಾದ ಎಲ್ಲಾ ಅಂಕಪಟ್ಟಿಗಳು

3) ಜಾತಿ ಪ್ರಮಾಣ ಪತ್ರ

4) ಅಂಗವಿಕಲತೆ ಇರುವ ಬಗ್ಗೆ ಜಿಲ್ಲಾ ಸರ್ಜನ್‌ರವರಿಂದ ವೈದ್ಯಕೀಯ ಪ್ರಮಾಣ ಪತ್ರ

5) ಫಾರ್ಮಸಿ ಕೌನ್ಸಿಲ್‌ನಲ್ಲಿ ನೊಂದಾಯಿಸಿರುವ ಬಗ್ಗೆ ಪ್ರಮಾಣ ಪತ್ರ.

6) ಮೂಲ ಡಿಮ್ಯಾಂಡ್ ಡ್ರಾಫ್ಟ್.

ಸದಸ್ಯ ಕಾರ್ಯದರ್ಶಿಗಳು

ನೇಮಕಾತಿ ಸಮಿತಿ ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ,

ಬೆಂಗಳೂರು – 560 009.

PD. 37

SC. 10

FORM-IV

(See Rule 12)

NOTICE

Dated: 20-12-2013

It is hereby notified that the undersigned has changed his/her name from MUDAKAPPA S/O LAXMAPPA ARER to MAHESH S/O LAXMAPPA ARER.

PD C/n. 86

SC - 10 **MUDAKAPPA LAXMAPPA ARER**

FORM-IV

(See Rule 12)

NOTICE

Dated: 28-06-2014

It is hereby notified that the undersigned has changed his/her name from MAHANTESH SHIVALINGAYYA GALIMATH to MAHANTESH A/F. SANGAYYA PANCHAYYANAVARMATH.

PD C/n. 87

SC - 10 **MAHANTESH SHIVALINGAYYA GALIMATH**

IN THE COURT OF THE CITY CIVIL JUDGE AT BANGALORE

P&SC.No. 25024/2014

Between

1. **Mrs.BEGUM JAN**
   W /O Late Nazeer @ Nazeer Ahmed, Aged about 57 years,
2. **Ms.RESHMA SULTHANA**
   D/O Late Nazeer @ Nazeer Ahmed, Aged about 30 years,
3. **Ms.ABIDA SULTHANA**
   D/O Late Nazeer @ Nazeer Ahmed, Aged about 26 years,
4. **Mr.RIYAZ**
   S/o Late Nazeer @ Nazeer Ahmed, Aged about 31 years,
5. **Mr.SALEEM**
   S/o Late Nazeer @ Nazeer Ahmed, Aged about 28 years,
6. **Mr.JAVEED**
   S/o Late Nazeer @ Nazeer Ahmed, Aged about 27 years,

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

7. **Mr. TABREZ**
S/o Late Nazeer @ Nazeer Ahmed, Aged about 25 years,
All are residing at No.43, 1st Main, Behind Drive-in-Theatre, New Gurappanapalya, Bannerghatta Road, Bangalore-29.

PETITIONERS

AND

NIL **RESPONDENT**

PUBLIC NOTICE

To

Whereas, the above mentioned petitioner/s has/have filed the petition for grant of succession certificate before Hon'ble (C.C.H.No.) under section 371 of the Indian Succession Act 1925 in respect of shares as descried in the schedule given below and held by deceased Nazeer @ Nazeer Ahamed who died intestate on 03/03/2007.

Be it know that no caveat has been entered and Interest parties are hereby warned to appear in this court in person by a pleader duly instructed on the . 11th day of August 2014 at 11'o clock in forenoon to show cause against the petition failing where-in, the matter will be heard and determined exparte.

SCHEUDLE

Bank saving account bearing account No.19830100003674

Given under my hand and seal of this court, this 26th day of June 2014

By Order of the court

P.D. 41 **Asst Registrar**

SC - 5 City Civil Court Bangalore

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಕೆ.ಎಸ್.ಆರ್.ಪಿ.ರವರ ಕಛೇರಿ, ನಂ.2, ನೃಪತುಂಗ ರಸ್ತೆ, ಬೆಂಗಳೂರು-560 001

ತಿದ್ದುಪಡಿ ಆದೇಶ ಸಂಖ್ಯೆ:11/ಸಿಬ್ಬಂದಿ(2)/2011-12, ದಿನಾಂಕ: 18-01-2014

ವಿಷಯ :- ಇಂಡಿಯಾ ರಿಸರ್ವ್ ಬೆಟಾಲಿಯನ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿ ಕುರಿತು.

ಉಲ್ಲೇಖ:- ಈ ಕಛೇರಿಯ ಅಧಿಸೂಚನೆ ಸಂಖ್ಯೆ: 10/ನೇಮಕಾತಿ-4/ಡಿ.ಐ.ಜಿ.ಪಿ/2011-12, ದಿನಾಂಕ:09-01-2012.

2. ಈ ಕಛೇರಿ ಅಂತಿಮ ಆಯ್ಕೆ ಪಟ್ಟಿ ಸಂಖ್ಯೆ: 11/ಸಿಬ್ಬಂದಿ(2)/2011-12, ದಿನಾಂಕ: 03-01-2014

ಇಂಡಿಯಾ ರಿಸರ್ವ್ ಬೆಟಾಲಿಯನ್ ಘಟಕದಲ್ಲಿ ಖಾಲಿ ಇರುವ 750 ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳನ್ನು ಭರ್ತಿ ಮಾಡಲು ಲಿಖಿತ ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂತಿಮ ಆಯ್ಕೆ ಪಟ್ಟಿಯನ್ನು ಉಲ್ಲೇಖ (2)ರಲ್ಲಿ ಹೊರಡಿಸಲಾಗಿರುತ್ತದೆ.

ಕಾರಣಾಂತರಗಳಿಂದ ಸದರಿ ಆಯ್ಕೆ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಅರ್ಹ ಅಭ್ಯರ್ಥಿಯ ಹೆಸರನ್ನು ಆಯ್ಕೆ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಪರಿಣಾಮದಿಂದ ಕೆಳಕಾಣಿಸಿದ ಬದಲಾವಣೆಗಳನ್ನು ಮಾಡಲಾಗಿದೆ.

ಅಂತಿಮ ಆಯ್ಕೆ ಪಟ್ಟಿಯಲ್ಲಿ ಮರು ಪರಿಶೀಲನೆ ನಂತರ ಸ್ಥಾನ ಪಡೆದ ಅಭ್ಯರ್ಥಿ

ಕ್ರಮ ಸಂಖ್ಯೆ	ನೋಂದಣಿ ಸಂಖ್ಯೆ	ಹೆಸರು	ಜನ್ಮ ದಿನಾಂಕ	ಎಸ್.ಎಸ್.ಎಲ್.ಸಿ. + ಸಿ.ಇ.ಟಿ. ಅಂಕ	ಜಾತಿ/ ಮೀಸಲಾತಿ	ಆಯ್ಕೆಯಾದ ಮೀಸಲಾತಿ
1.	3452807	ಸಂತೋಷ್ ಜ್ಯೋತ್ಯಪ್ಪ ಮನಕಾಪುರೆ	01-06-1992	128.48	3(ಬಿ) ಗ್ರಾ/ಕ	ಸಾಮಾನ್ಯ ಇತರೆ

ಅಂತಿಮ ಆಯ್ಕೆ ಪಟ್ಟಿಯಲ್ಲಿ ಮರು ಪರಿಶೀಲನೆ ನಂತರ ಸ್ಥಾನ ಬದಲಿಗೊಂಡ ಅಭ್ಯರ್ಥಿಗಳು

ಕ್ರ. ಸಂ.	ನೋಂದಣಿ ಸಂಖ್ಯೆ	ಹೆಸರು	ಜನ್ಮ ದಿನಾಂಕ	ಎಸ್.ಎಸ್.ಎಲ್.ಸಿ. + ಸಿ.ಇ.ಟಿ. ಅಂಕ	ಜಾತಿ/ ಮೀಸಲಾತಿ	ಆಯ್ಕೆಯಾದ ಮೀಸಲಾತಿ	ಪರಿಷ್ಕರಣೆ ನಂತರದ ಮೀಸಲಾತಿ
1.	3480579	ಸಾಗರ್ ಬಿ.	21-01-1990	124.36	ಎಸ್.ಸಿ. (ಕನ್ನಡ)	ಸಾಮಾನ್ಯ ಇತರೆ	ಎಸ್.ಸಿ. (ಕನ್ನಡ)
2.	3451330	ರಾಜುಹಲಗೂರು	20-01-1988	122.96	ಎಸ್.ಸಿ ಗ್ರಾ/ಕ	ಎಸ್.ಸಿ. (ಕನ್ನಡ)	ಎಸ್.ಸಿ. (ಗ್ರಾಮೀಣ)
3.	3600480	ಅಜ್ಜಪ್ಪ ಮಲ್ಲಪ್ಪ ಮಾದರ್	01-08-1989	118.48	ಎಸ್.ಸಿ ಗ್ರಾ/ಕ	ಎಸ್.ಸಿ. (ಗ್ರಾಮೀಣ)	ಎಸ್.ಸಿ. (ಇತರೆ)

ಅಂತಿಮ ಆಯ್ಕೆ ಪಟ್ಟಿಯಲ್ಲಿ ಮರು ಪರಿಶೀಲನೆ ನಂತರ ಸ್ಥಾನ ಕಳೆದುಕೊಂಡ ಅಭ್ಯರ್ಥಿ

ಕ್ರಮ ಸಂಖ್ಯೆ	ನೋಂದಣಿ ಸಂಖ್ಯೆ	ಹೆಸರು	ಜನ್ಮ ದಿನಾಂಕ	ಎಸ್.ಎಸ್.ಎಲ್.ಸಿ. + ಸಿ.ಇ.ಟಿ. ಅಂಕ	ಜಾತಿ/ ಮೀಸಲಾತಿ	ಆಯ್ಕೆಯಾದ ಮೀಸಲಾತಿ	ಪರಿಷ್ಕರಣೆ ನಂತರದ ಮೀಸಲಾತಿ
1.	3012023	ಮಾಂತೇಶ್ ಎನ್.ಎಂ.	31-07-1992	113.16	ಎಸ್.ಸಿ ಗ್ರಾ/ಕ	ಎಸ್.ಸಿ. ಇತರೆ	ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವುದಿಲ್ಲ

ಈ ತಿದ್ದುಪಡಿ ಆದೇಶವನ್ನು ಸಂಬಂಧಿಸಿದವರ ಗಮನಕ್ಕಾಗಿ ಹೊರಡಿಸಲಾಗಿರುತ್ತದೆ.

P.R. 70 ಅಧ್ಯಕ್ಷರು, ಐ.ಆರ್.ಬಿ.ಪಿ.ಸಿ. ಆಯ್ಕೆ ಸಮಿತಿ ಮತ್ತು ಡೆಪ್ಯೂಟಿ ಇನ್ಸ್‌ಪೆಕ್ಟರ್

SC - 100 ಜನರಲ್ ಆಫ್ ಪೊಲೀಸ್ ಕೆ.ಎಸ್.ಆರ್.ಪಿ. ಬೆಂಗಳೂರು

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59